ಜಿಲ್ಲಾ ಅಧಿಕಾರಿಯವರ ಕಚೇರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಮೌಲಾನಾ ಅಜಾದ್ ಭವನ, ಶಿವಳ್ಳಿ,
ಅಲೆವೂರು ರಸ್ತೆ, ಮಣಿಪಾಲ- 576104
ಉಡುಪಿ ಜಿಲ್ಲೆ

ದೂರವಾಣಿ: 0820-2573596
ಇಮೇಲ್: domudupi@gmail.com
ಸಹಾಯವಾಣಿ : 82777 99990
ಟ್ವಿಟರ್ : @minorityudupi
ಫೇಸ್‌ಬುಕ್ : facebook.com/domudupi

ಸಂಖ್ಯೆ: ಅಸಂಇಉ/ವಿದ್ಯಾಸಿರಿ/ಸಿಆರ್-04/2022-23

## ಪ್ರಕಟಣೆ

# ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2022-23ನೇ ಸಾಲಿನಲ್ಲಿ **ವಿದ್ಯಾಸಿರಿ ಯೋಜನೆಯಡಿ** ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ) ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಸಿಗದೆ ಇರುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರೆಸಲು ಅನುಕೂಲವಾಗುವಂತೆ ಊಟ ಮತ್ತು ವಸತಿ ಸೌಲಭ್ಯಕ್ಕೆ ಸಹಾಯ ಒದಗಿಸಲು ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿರಬೇಕು ಹಾಗೂ ವ್ಯಾಸಂಗ ಮಾಡುವ ಕಾಲೇಜಿನಿಂದ ಕನಿಷ್ಠ 5 ಕಿ.ಮೀ ದೂರದವರಾಗಿರಬೇಕು. ಆದರೆ ವಿದ್ಯಾರ್ಥಿಯ ಸ್ವಂತ ಸ್ಥಳ ನಗರ/ಪಟ್ಟಣ ಆಗಿದ್ದು ಅವರು ಬೇರೆ ನಗರ/ಪಟ್ಟಣದಲ್ಲಿರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ವಿದ್ಯಾರ್ಥಿಗಳು ಹಿಂದಿನ ವರ್ಷದ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು. ಈ ಸೌಲಭ್ಯ ಪಡೆಯಲು ವಿದ್ಯಾರ್ಥಿಯ ಪೋಷಕರ ಕುಟುಂಬದ ವಾರ್ಷಿಕ ವರಮಾನ ಪ್ರವರ್ಗ-1 ರೂ.2.50ಲಕ್ಷ ಹಾಗೂ ಇತರ ಅಲ್ಪಸಂಖ್ಯಾತ ವರ್ಗದವರಿಗೆ ರೂ 2.00ಲಕ್ಷ. ಅರ್ಜಿ ಸಲ್ಲಿಸಲು **20.10.2022** ಕೊನೆಯ ದಿನಾಂಕವಾಗಿರುತ್ತದೆ.

**ಆನ್‌ಲೈನ್ ಅರ್ಜಿ ಸಲ್ಲಿಸಲು ಬೇಕಾದ ದಾಖಲೆಗಳು** :

1) ವಿದ್ಯಾರ್ಥಿಯ ಜಾತಿ ಮತ್ತು ಆದಾಯ ಪ್ರಮಾಣ ಪತ್ರ
2) ಹಿಂದಿನ ಕೋರ್ಸಿನ ಅಂಕಪಟ್ಟಿಯ ದೃಢೀಕೃತ ಪ್ರತಿ (ಸೆಮಿಸ್ಟರ್ ಆದಲ್ಲಿ ಎರಡು ಸೆಮಿಸ್ಟರ್ ಅಗತ್ಯ)
3) ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ದೃಢೀಕೃತ ಪ್ರತಿ
4) ಸ್ವಂತ ಸ್ಥಳದಿಂದ ಕಾಲೇಜಿಗಿರುವ ದೂರದ ಪ್ರಮಾಣ ಪತ್ರ
5) ಆಧಾರ್ ಕಾರ್ಡ್
6) ಬ್ಯಾಂಕ್ ಪಾಸ್ ಪುಸ್ತಕ
7) ಕಾಲೇಜು ಪ್ರಾಂಶುಪಾಲರಿಂದ ಪರಿಶೀಲನಾ ವರದಿ
8) ಪಾಸ್‌ಪೋರ್ಟ್ ಸೈಜ್ ಫೋಟೋ

ಅರ್ಜಿಯನ್ನು ಕಡ್ಡಾಯವಾಗಿ ಸೇವಾ-ಸಿಂಧು (**Seva-Sindhu**) ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ **https://dom.karnataka.gov.in/udupi/public** ನಲ್ಲಿ ಅಥವಾ 24×7 ಸಹಾಯವಾಣಿ ಸಂಖ್ಯೆ **8277799990** ಗೆ ಅಥವಾ ಆಯಾ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಉಡುಪಿ 0820-2574596, ಕುಂದಾಪುರ 08254-230370 ಹಾಗೂ ಕಾರ್ಕಳ 08258-231101 ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 19.09.2022
ಸ್ಥಳ : ಉಡುಪಿ

(ಸಚಿನ್ ಕುಮಾರ್)
ಜಿಲ್ಲಾ ಅಧಿಕಾರಿ
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಉಡುಪಿ

---

No. NITK/Academic/2022-23/E4

Date: 21.09.2022

To,

The Chairman CCC kindly arrange to upload in the Institute Website for the information of the respective students.

Assistant Registrar (Academic)
National Institute of Technology
Karnataka, Surathkal
Srinivasnagar, Mangalore-575 025

Asst. Registrar (Academic)